**ಸಾಕ್ಷಿಯನ್ನು ದಿನಾಂಕ: 17-03-2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು :- ವಾದಿ ಪರ ವಕೀಲರಾದ ಶ್ರೀ ಕೆ. ರವಿಶಂಕರ್ ರವರಿಂದಃ**

ನಾನು 5 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಭಾಷೆಯನ್ನು ಅಷ್ಟಾಗಿ ಓದಲು ಮತ್ತು ಬರೆಯಲು ಬರುವುದಿಲ್ಲ. ನನಗೆ ಆಂಗ್ಲ ಭಾಷೆಯನ್ನು ಓದಲು ಮತ್ತು ಬರೆಯಲು ಬರುವುದಿಲ್ಲ. ವಾದಿಯು ಹಾಕಿರುವ ದಾವೆ ಮತ್ತು ಹಾಜರು ಮಾಡಿರುವ ದಾಖಲೆಗಳ ಬಗ್ಗೆ ತಿಳಿದುಕೊಂಡಿರುತ್ತೇನೆ. ವಾದಿಯ ತವರು ಮನೆ ನಮ್ಮ ಊರಿನಲ್ಲಿ ಇರುವುದರಿಂದ ಆಕೆ ಹುಟ್ಟಿದಾಗಿನಿಂದ ನನಗೆ ಪರಿಚಿತಳು. ವಾದಿ ಮತ್ತು ನನ್ನ ನಡುವೆ ಯಾವುದೇ ವ್ಯವಹಾರ ಆಗಿರುವುದಿಲ್ಲ.

ಕನ್ನಮಂಗಲ ಗ್ರಾಮದ ಸರ್ವೆ ನಂ.139 ರ ಜಮೀನು ನನ್ನ ತಾತನಿಗೆ ಮಂಜೂರಾಗಿದೆ ಎಂದರೆ ಸರಿ. ಸದರಿ ಜಮೀನಿನಲ್ಲಿ ನಾನೇ ಸ್ವಾಧೀನದಲ್ಲಿಟ್ಟುಕೊಂಡು ವ್ಯವಸಾಯ ಮಾಡುತ್ತಿದ್ದೆ ಎಂದರೆ ಸರಿ. 2008 ನೇ ಸಾಲಿನಲ್ಲಿ ದಾವಾ ಜಮೀನನ್ನು ನಾನು ಮಾರಾಟಕ್ಕಿಟ್ಟಿದ್ದೆ ಎಂದರೆ ಸುಳ್ಳು. ವಾದಿಯ ಜೊತೆ ಮಾತನಾಡಿ ಮುಂಗಡ ಹಣ ಪಡೆದಿದ್ದೇನೆ ಎಂದರೆ ಸುಳ್ಳು. 2013 ನೇ ಸಾಲಿನಲ್ಲಿ ನಾನು ಮತ್ತು ನನ್ನ ಕುಟುಂಬದ ಇತರೆ ಸದಸ್ಯರು ಸೇರಿ ವಾದಿ ಪರವಾಗಿ ಒಂದು ಜಿ.ಪಿ.ಎ ಬರೆದುಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು Permission ಗೆ ಸಹಿ ಮಾಡಿ ಕೊಟ್ಟಿದ್ದೇವೆ ಎನ್ನುತ್ತಾರೆ. ವಾದಿಯಿಂದ ಹಣ ಪಡೆದು ದಿನಾಂಕಃ 06-07-2013 ರಂದು ನಿಪಿ-2 ರ ಪ್ರಕಾರ ಆಕೆಯ ಪರವಾಗಿ ಜಿ.ಪಿ.ಎ ಬರೆದುಕೊಟ್ಟು ನೋಂದಣಿ ಮಾಡಿಸಿಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನಿಪಿ-2 ರ ಪ್ರಕಾರ ದಾವಾ ಜಮೀನನ್ನು ಮಾರಾಟ ಮಾಡಲು ಮತ್ತು ಹಣ ಪಡೆಯಲು ವಾದಿಗೆ ಅಧಿಕಾರ ನೀಡಿದ್ದೇವೆ ಎಂದರೆ ಸುಳ್ಳು.

ವಾದಿಯು ನಂಜುಂಡಶಾಸ್ತ್ರೀ ಎನ್ನುವವರ ಪರವಾಗಿ ದಾವಾ ಜಮೀನಿಗೆ ಸಂಬಂಧಿಸಿದಂತೆ ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿ. ವಾದಿಯು 2008 ರಿಂದ 2015 ರ ಅವಧಿಯಲ್ಲಿ ನನಗೆ ಮತ್ತು ನನ್ನ ಕುಟುಂಬ ಸದಸ್ಯರಿಗೆ ರೂ.1,16,25,000/- ಹಣವನ್ನು ನಗದು, ಚೆಕ್ಕುಗಳು ಮತ್ತು ಬ್ಯಾಂಕಿನ ವರ್ಗಾವಣೆಗಳ ಮುಖಾಂತರ ಪಾವತಿ ಮಾಡಿದ್ದಾಳೆ ಎಂದರೆ ಸುಳ್ಳು. ಹಣ ಪಾವತಿ ಬಗ್ಗೆ ವಾದಿಯು ದಾಖಲೆಗಳನ್ನು ಹಾಜರು ಮಾಡಿದ್ದಾಳೆ ಎಂದರೆ ಸುಳ್ಳು. ಸಾಕ್ಷಿಯು ಮುಂದುವರೆದು ವಾದಿಯಿಂದ ಸಾಲ ಪಡೆದಿದ್ದು, ಅದನ್ನು ಮರುಪಾವತಿಸಿದ್ದೇನೆ ಎನ್ನುತ್ತಾರೆ. ವಾದಿಯಿಂದ ಹಣವನ್ನು ನಗದಾಗಿ ಪಡೆದ ಬಗ್ಗೆ Voucher ಗಳಿಗೆ ಸಹಿ ಮಾಡಿ ನೀಡಿದ್ದೇನೆ ಎಂದರೆ ಸುಳ್ಳು.

ವಾದಿಯಿಂದ ನಾನು ರೂ.5,00,000/- ಹಣವನ್ನು ಸಾಲ ಪಡೆದಿದ್ದು, ವಾಪಸ್ಸು ಮಾಡಿರುತ್ತೇನೆ. ಹಣವನ್ನು ಮರುಪಾವತಿ ಮಾಡಿದ ಬಗ್ಗೆ ನನ್ನ ಬಳಿ ದಾಖಲೆ ಇರುವುದಿಲ್ಲ. ನಾನು ವಾದಿಯಿಂದ ಯಾವುದೇ ಹಣವನ್ನು ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ವಾದಿಯಿಂದ ರೂ.1,16,25,000/- ಹಣವನ್ನು ದಾವಾ ಜಮೀನಿನ ಮಾರಾಟಕ್ಕೆ ಸಂಬಂಧಿಸಿದಂತೆ ಪಡೆದಿದ್ದೇನೆ ಎಂದರೆ ಸುಳ್ಳು. ನನಗೆ ಹಣ ನೀಡಿರುವ ಬಗ್ಗೆ ವಾದಿ ತನ್ನ ಬ್ಯಾಂಕಿನ ಖಾತೆಯ ಸ್ಟೇಟ್ಮೆಂಟ್ ಹಾಜರು ಮಾಡಿದ್ದಾಳೆ ಎಂದರೆ ಸುಳ್ಳು.

ದಾವಾ ಜಮೀನಿನ ನಮ್ಮ ಸ್ವಾಧೀನಕ್ಕೆ ನಂಜುಂಡಶಾಸ್ತ್ರೀ ತೊಂದರೆ ನೀಡಿರುತ್ತಾನೆ. ಆತನಿಗೆ ಲಾಯರ್ ಪತ್ರ ಕಳುಹಿಸಿರುತ್ತೇನೆ. ಈ ಹಂತದಲ್ಲಿ ಸಾಕ್ಷಿಗೆ ನಿಡಿ-5 ನ್ನು ತೋರಿಸಲಾಗಿ ಅದನ್ನು ಒಪ್ಪಿಕೊಂಡಿರುತ್ತಾರೆ. ನಿಡಿ-5 ರ 2 ನೇ ಕಂಡಿಕೆಯ ಪ್ರಕಾರ ದಾವಾ ಜಮೀನನ್ನು ನಾವು ನೋಡಿಕೊಳ್ಳಲಾಗುವುದಿಲ್ಲ ಮತ್ತು ಮಾರಾಟ ಮಾಡಲಾಗುವುದಿಲ್ಲ ಎಂದು ವಾದಿ ಪರವಾಗಿ ಜಿ.ಪಿ.ಎ ಬರೆದುಕೊಟ್ಟಿರುವ ಬಗ್ಗೆ ಹೇಳಿದ್ದೇವೆ ಎಂದರೆ ಸುಳ್ಳು. ಅದೇ ರೀತಿ ಸದರಿ ದಾಖಲೆಯ 3 ಮತ್ತು 4 ನೇ ಕಂಡಿಕೆಯಲ್ಲಿ ವಾದಿಯು ದಾವಾ ಜಮೀನನ್ನು ರೂ.2,30,00,000/- ಕ್ಕೆ ಮಾರಾಟ ಮಾಡಿ ರೂ.1,40,00,000/- ಹಣವನ್ನು ಪಡೆದಿದ್ದರೂ ಸಹ ನಮಗೆ ಯಾವುದೇ ಹಣ ನೀಡಿಲ್ಲ ಎಂದು ಹೇಳಿದ್ದೇವೆ ಎಂದರೆ ಸರಿಯಲ್ಲ. ಸದರಿ ಮುಂಗಡ ಹಣವಾದ ರೂ.1,40,00,000/- ರ ಪೈಕಿ ವಾದಿಯು ನಮಗೆ ರೂ.1,16,25,000/- ಪಾವತಿ ಮಾಡಿದ್ದಾಳೆ ಎಂದರೆ ಸುಳ್ಳು. ಎಲ್ಲಾ ವ್ಯವಹಾರ ಮಾಡಿ ವಾದಿಯಿಂದ ಹಣ ಪಡೆದಿದ್ದರೂ ಸಹ ವಾದಿಗೆ ಗೊತ್ತಾಗದ ರೀತಿ ನೋಂದಾಯಿತ ಜಿ.ಪಿ.ಎ ಯನ್ನು ರದ್ದು ಮಾಡಿದ ಬಗ್ಗೆ ರದ್ದತಿ ಪತ್ರವನ್ನು ಮಾಡಿದ್ದೇವೆ ಎಂದರೆ ಸಾಕ್ಷಿ ನೋಟಿಸು ಕೊಟ್ಟು ಮಾಡಿದ್ದೇವೆ ಎಂದು ಹೇಳುತ್ತಾರೆ. ನಾವು ವಾದಿ ಜೊತೆ ವ್ಯವಹಾರ ಮಾಡಿ ಬರೆದುಕೊಟ್ಟ ಜಿ.ಪಿ.ಎ ಮೇರೆಗೆ ವಾದಿಯು ನಂಜುಡಶಾಸ್ತ್ರೀ ಜೊತೆ ವ್ಯವಹಾರ ಮಾಡಿ ಪಡೆದ ಮುಂಗಡ ಹಣದ ಪೈಕಿ ರೂ.1,16,25,000/- ನ್ನು ನಮಗೆ ಪಾವತಿ ಮಾಡಿದ್ದರೂ ಸಹ ಈಗ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಜಮೀನಿಗೆ ಸಂಬಂಧಿಸಿದಂತೆ ಮಾರಾಟ ವ್ಯವಹಾರ ಆಗಿದ್ದರೂ ಸಹ ವ್ಯವಹಾರವು ಬಡ್ಡಿ ಹಣಕ್ಕೆ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯನ್ನು ಮಾರಾಟ ಮಾಡುವ ಅನುಮತಿಯ ಸಲುವಾಗಿ ನಾನು ಜಿಲ್ಲಾಧಿಕಾರಿಗಳ ಮುಂದೆ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಅರ್ಜಿಯನ್ನು ಅನುಮೋದಿಸುವ ಪೂರ್ವದಲ್ಲಿ ಹಿಂಪಡೆದಿದ್ದೇನೆ ಎಂದರೆ ಸರಿ. ಸಾಕ್ಷಿಗೆ ಈ ಹಂತದಲ್ಲಿ ಸದರಿ ಅರ್ಜಿಗೆ

ಸಂಬಂಧಿಸಿದಂತೆ ಕಛೇರಿ ಟಿಪ್ಪಣಿ ಮತ್ತು ಆದೇಶದ ದೃಢೀಕೃತ ನಕಲನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ಒಪ್ಪಿಕೊಂಡಿರುವುದರಿಂದ ಅದನ್ನು **ನಿಪಿ-40 ಎಂದು ಗುರುತಿಸಲಾಯಿತು**.

ಕೆ.ಆರ್. ಪೇಟೆ ತಾಲೂಕಿನ ಭೂಕನಕೆರೆ ಗ್ರಾಮದ ಸರ್ವೆ ನಂ.104 ರ 01-34 ಎಕರೆ ಜಮೀನನ್ನು ಖರೀದಿ ಮಾಡಲು ಅದರ ಮಾಲೀಕನ ಜೊತೆ ಕರಾರು ಪತ್ರ ಮಾಡಿಕೊಂಡಿದ್ದೇನೆ ಎಂದರೆ ಸುಳ್ಳು. ದಾವಾ ಜಮೀನಿನ ಮಾರಾಟದ ಅನುಮತಿ ಸಲುವಾಗಿ ಸದರಿ ಕರಾರು ಪತ್ರ ಮಾಡಿಕೊಂಡಿದ್ದೆ ಎಂದರೆ ಸಾಕ್ಷಿಯು ನಾನು ವಾದಿಯ ಜೊತೆ ಯಾವುದೇ ವ್ಯವಹಾರ ಮಾಡಿಲ್ಲ ಮತ್ತು ಆತನ ಗಂಡನಾದ ರಾಮಾಂಜಿನಪ್ಪನ ಜೊತೆ ವ್ಯವಹಾರ ಮಾಡಿದ್ದೇನೆ ಎಂದು ಹೇಳುತ್ತಾರೆ. ಸಾಕ್ಷಿಯು ಮತ್ತೊಮ್ಮೆ ಆತನಿಂದ ರೂ.6,00,000/- ಮಾತ್ರ ಪಡೆದು ಮರುಪಾವತಿ ಮಾಡಿದ್ದೇನೆ ಎಂದು ಹೇಳುತ್ತಾರೆ. ನಾನು ವಾದಿಯ ಜೊತೆ ದಾವಾ ಜಮೀನಿನ ಮಾರಾಟದ ವ್ಯವಹಾರ ಮಾಡಿ ಆಕೆಗೆ ಗೊತ್ತಿಲ್ಲದ ಹಾಗೇ ನಾವು ಬರೆದುಕೊಟ್ಟಿರುವ ಜಿ.ಪಿ.ಎ ರದ್ದು ಮಾಡಿದ್ದೇವೆ ಎಂದರೆ ಸರಿಯಲ್ಲ. ನಾವು ವಾದಿ ಜೊತೆ ವ್ಯವಹಾರ ಮಾಡಿ ಆಕೆಯಿಂದ ಹಣ ಪಡೆದಿದ್ದರೂ ಸಹ ಈಗ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**